ವೈದ್ಯ: ಕಾಲಿಗೆ ಪ್ಲಾಸ್ಟರ್ ಹಾಕು ಅಂದ್ರೆ ಅವನ ಬಾಯಿಗೆ ಹಾಕಿದ್ದೀಯಲ್ಲ ಯಾಕೆ?

ನರ್ಸ್: ಅವನು ನನ್ನನ್ನು ನೋಡಿದ ತಕ್ಷಣ 'ಐ ಲವ್ ಯು' ಅಂತ ಬಡಕೋತಾನೆ, ಅದಕ್ಕೆ!

★★★



ಪೊಲೀಸ್: ರೀ ಯಾರ್ರೀ ಅದು? ಪಾರ್ಕಲ್ಲಿ ಕತ್ತಲಲ್ಲಿ ಕುಳಿತುಕೊಂಡು ಏನು ಮಾಡ್ತಾ ಇದೀರಾ?

ಗುಂಡ: ಇವಳು ನನ್ನ ಹೆಂಡತಿ ಸಾರ್

ಪೊಲೀಸ್: ಓ ಸಾರಿ ಕ್ಷಮಿಸಿ! ಆಕೆ ನಿಮ್ಮ ಹೆಂಡತಿ ಅಂತ ನನಗೆ ಗೊತ್ತಿರಲಿಲ್ಲ.

ಗುಂಡ: ನೀವು ನಮ್ಮೆಡೆಗೆ ಟಾರ್ಚ್ ಬಿಡುವವಗೆ ನನಗೂ ಗೊತ್ತಿರಲಿಲ್ಲ ಸಾರ್!

★★★

ಗುಂಡ: ಇವತ್ತು ಊರೆಲ್ಲಾ ಅಲೆದಾಡಿದರೂ ನನಗೆ ಬೇಕಾಗಿದ್ದು ಕೊನೆಗೂ ಸಿಗಲಿಲ್ಲ

ಗೆಳೆಯ: ಹೌದಾ? ಏನಪ್ಪಾ ಅಂಥಾದ್ದು?

ಗುಂಡ: ಸಾಲ

★★★

ಪೊಲೀಸ್: ಏನಯ್ಯಾ ನಿನಗೆ 'ನೋ ಎಂಟ್ರಿ' ಬೋರ್ಡ್ ಕಾಣಿಸಲಿಲ್ಲವಾ? ರಾಂಗ್ ಸೈಡ್‌ನಲ್ಲಿ ಬರ್ತಾ ಇದೀಯಾ.

ಗುಂಡ: ಸಾರಿ ಸಾರ್! ಬೋರ್ಡ್ ನೋಡ್ದೆ, ಆದರೆ ನಿಮ್ಮನ್ನು ನೋಡಲಿಲ್ಲ.

★★★

ಕಪ್ಪೆ: ಜ್ಯೋತಿಷಿಗಳೇ ನನ್ನ ಮುಂದಿನ ಭವಿಷ್ಯ ಹೇಗಿದೆ ನೋಡಿ ಹೇಳಿ

ಜ್ಯೋತಿಷಿ: (ಪಂಚಾಂಗ ನೋಡಿ) ಸುಂದರ ಹುಡುಗಿಯೊಬ್ಬಳು ನಿನ್ನನ್ನು ಸಂಪೂರ್ಣವಾಗಿ ಅರಿಯಲು ಬಯಸಿ ಕಾಣಲು ಬರುವಳು.

ಕಪ್ಪೆ: ಯಾವಾಗ ಎಲ್ಲಿ?

ಜ್ಯೋತಿಷಿ: ಕಾಲೇಜಿನ ಜೂವಾಲಜಿ ಲ್ಯಾಬೋರೇಟರಿಯಲ್ಲಿ!

★★★

ಸಂಪಾದಕ: ಏನಯ್ಯಾ ನೀನು ನಿನ್ನ ಲೇಖನದ ಜೊತೆಗೆ ಕಲ್ಲನ್ನು ಇಟ್ಟು ಕಳುಹಿಸಿದ್ದೀಯಲ್ಲ ಯಾಕೆ?

ಲೇಖಕ: ನೀವೇ ಹೇಳಿದ್ದೀರಲ್ಲ ಸಂಪಾದಕರೇ! ಬರಹಗಳಲ್ಲಿ ತೂಕ ಇರಬೇಕು ಅಂತ. ಅದಕ್ಕೆ.

★★★

ಪ್ರವಾಸಿ: ಏನಯ್ಯಾ ಈ ನದಿಯಲ್ಲಿ ಮೊಸಳೆಗಳು ಜಾಸ್ತಿ ಇದೆಯಂತೆ ಹೌದಾ?

ಅಂಬಿಗ: ಈಗ ನೀವು ಕುಳಿತಿರುವ ದೋಣಿಯನ್ನು ತಳ್ಳುತ್ತಿರುವವರು ಯಾರು ಅಂದು ಕೊಂಡಿರಿ?

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

---



ಗುಂಡ: ಏನು ರಾಯರೇ ತುಂಬಾ ಖುಷಿಯಾಗಿದ್ದೀರಾ?

ರಾಯರು: ನನ್ನ ಹೆಂಡತಿಗೆ ಬಾಯಿ ಹುಣ್ಣು.

★★★

**ಆಧಾರ್ ಲಿಂಕ್ ಆಗಿದೆ**

ಅಪ್ಪ ಕರಿಯಪ್ಪ: ಮಗನೆ ರಿಸಲ್ಟ್ ಏನಾಯ್ತೋ

ಮಗ ಕಾಡಪ್ಪ: ಅಪ್ಪಾ 80% ಆಯ್ತು

ಅಪ್ಪ ಕರಿಯಪ್ಪ: ಆದರೆ ಮಾರ್ಕ್ಸ್ ಕಾರ್ಡಿನಲ್ಲಿ 40 ಅಂತ ಇದೆಯಲ್ಲೋ

ಮಗ ಕಾಡಪ್ಪ: ಅಪ್ಪ ಅದು ಉಳಿದದ್ದು ಆಧಾರ್‌ಗೆ ಲಿಂಕ್ ಆಗಿದೆ. ಸೀದಾ ನನ್ನ ಅಕೌಂಟ್‌ಗೆ ಹೋಗುತ್ತೆ.

★★★

**ಕೊನೆಗೆ ಕೂಡೋದು**

ಮದುಮಗ: ಪಂಡಿತರೆ ಮದುಮಗಳನ್ನು ಬಲಕ್ಕೆ ಕೂಡಸ್ಲಾ?

ಪಂಡಿತರು: ಏನಂದೆ

ಮದುಮಗ: ಅಲ್ಲ ಪಂಡಿತರೆ ಮದುಮಗಳನ್ನು ನನ್ನ ಎಡಗಡೆನೋ ಅಥವಾ ಬಲಗಡೆ ಕೂಡಿಸೋದಾ?

ಪಂಡಿತರು: ಎಲ್ಲಾದ್ರೂ ಕೂಡಿಸ್ಕೋ ಹೋಗು, ಕೊನೆಗೆ ಅವ್ಳು ಕೂಡೋದು ನಿನ್ನ ತಲೆ ಮೇಲೇನೇ ತಾನೆ?

★★★

**ನಮ್ಮ ಕೈಲೇ ಇರುತ್ತೆ**

ಶಿಕ್ಷಕ: ಗಾಳಿಪಟ ಎಷ್ಟು ದೂರ ಹೋದ್ರೂ ಸೂತ್ರ ನಮ್ಮ ಕೈಲೆ ಇರುತ್ತೆ

ಗುಂಡ: ನೀವೇಳಿದ್ದು ನಿಜ ಸರ್

ಶಿಕ್ಷಕ: ಹಾಗಿದ್ರೆ ಇದಕ್ಕೊಂದು ಉದಾಹರಣೆ ಕೊಡು ನೋಡೋಣ.

ಗುಂಡ: ಅದಕ್ಕೇನು ಸರ್ ನಾವು ಮೆಸೇಜನ್ನ ಫಾರಿನ್ನಿಗೆ ಕಳಿಸಿದ್ರೂ ಮೊಬೈಲ್ ನಮ್ಮ ಕೈಲೇ ಇರುತ್ತೆ.

**(ಸಂಗ್ರಹ) ಕುಬೇರಪ್ಪ ಎಂ. ವಿಭೂತಿ, ಹರಿಹರ**